**ಓ. ಎಸ್ . 141/2018**

**ಪಿ.ಡಬ್ಲ್ಯೂ- 1**

**(ದಿನಾಂಕಃ06-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

ಮುಂದುವರೆದ ಪಾಟಿ ಸವಾಲು ಃ ಶ್ರೀ ಆರ್ ಬಿ ಸಿ ಪ್ರತಿವಾದಿ ಪರ ವಕೀಲರಿಂದ -

ಆರ್ ಎಸ್ ಸಂಖ್ಯೆಃ 179 ಬಿ/3 ರಸ್ತೆಯ ಉತ್ತರಕ್ಕೆ ಬರುತ್ತದೆ ಎಂದರೆ ಸರಿ . ಆರ್ ಎಸ್ ಸಂಖ್ಯೆಃ 179 ಬಿ/3 ಆಸ್ತಿ ಉತಾರ ನೋಡಿರುತ್ತೇನೆ. ಅದರಲ್ಲಿ ಕರೆಪ್ಪ ಬಾಳಪ್ಪಾ ಮಾಳಗಿ, ಬಸವಣ್ಣಿ ಕೆಂಚಪ್ಪ ಮಾಳಗಿ ಮತ್ತು ಗೋದವ್ವ ಮಾಳಗಿ, ಕೆಂಚಪ್ಪ ಬಾಳಪ್ಪಾ ಮಾಳಗಿ , ನನ್ನ ಹೆಸರು ಮಾರುತಿ ಸತ್ಯಪ್ಪ ಮಾಳಗಿ, ಬಸವರಾಜ ಸತ್ಯಪ್ಪ ಮಾಳಗಿರವರ ಹೆಸರುಗಳು ಇರುತ್ತವೆ. ಮಲ್ಲಿಕಾರ್ಜುನ ಬಾಬು ಜರಳಿರವರ ಹೆಸರು ಇರುತ್ತದೆ ಎಂದರೆ ಸರಿ . ನನ್ನನ್ನು ಹೊರತುಪಡಿಸಿ ಈ ಮೇಲೆ ಹೇಳಿದ ವ್ಯಕ್ತಿಗಳು ಪ್ರತಿವಾದಿಯವರ ವಿರುದ್ಧ ದಾವಾ ಆಸ್ತಿಯಲ್ಲಿ ಹೊಸ ರಸ್ತೆ ಮಾಡುತ್ತಿದ್ದಾರೆಂದು ದಾವೆ ಸಲ್ಲಿಸಿರುವುದಿಲ್ಲ. ಮೇಲೆ ಹೇಳಿದ ವ್ಯಕ್ತಿಗಳೂ ಸಹ ಸರ್ವೆ ಸಂಖ್ಯೆಃ 179 ಬಿ/3 ರ ಜಂಟಿ ಮಾಲೀಕರು ಎಂದರೆ ಸರಿ .

ಪ್ರತಿವಾದಿಯವರ ಆಸ್ತಿಯ ಉತ್ತರಕ್ಕೆ ಬಾಳಪ್ಪಾ ಮಾಳಗಿ, ಮಾರುತಿ ಮಾಳಗಿ, ರಸುಲ ನದಾಫ, ವಿನೋದ ಚೌದರಿ ಮತ್ತು ಪ್ರತಿವಾದಿಯರು, ಕರೆಪ್ಪ ಪೂಜೇರಿ ಮತ್ತು ಗೋದವ್ವ ಚೌಗಲಾರವರು ಮನೆ ಕಟ್ಟಿದ್ದಾರೆ ಎಂದರೆ ಸರಿ . ಇವೆಲ್ಲ ಮನೆಗಳು ಕಟ್ಟಿ 20-22 ವರ್ಷವಾಗಿರುತ್ತದೆ ಎಂದರೆ ಸರಿ . ರಸ್ತೆಯ ಉತ್ತರಕ್ಕೆ ರೇಣುಕಾ ಮಗೆನ್ನವರ, ಮಲ್ಲಪ್ಪ ಮಾಳಗಿ, ನೂರಜಾನ ನದಾಫ, ಅಶೋಕ ಮಗೆನ್ನವರ, ಮಲ್ಲಿಕಾರ್ಜುನ ಜರಳಿರವರು ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ . ಪ್ರತಿವಾದಿರು ಮತ್ತು ಕಟ್ಟಿದ ಮನೆಗಳಲ್ಲಿ ಅವರೇ ಕಬ್ಜಾ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿ . ಪ್ರತಿವಾದಿ ಮನೆ ಮುಂದಿರುವ ರಸ್ತೆ ಮುಖಾಂತರವೇ ಎಲ್ಲರೂ ಹಾದುಹೋಗುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಅದರಲ್ಲಿನ ಗಿಡಗಳು ಸುಮಾರು 20-25 ವರ್ಷದಿಂದ ಇವೆ ಎಂದರೆ ಸರಿ ಎನ್ನುತ್ತಾರೆ. ವಿಪಿಸಿ ಸಂಖ್ಯೆಃ 571/4 ರ ಚೆಕ್‌ಬಂದಿ ಉತಾರವನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪೂರ್ವಕ್ಕೆ ರಸ್ತೆ ಮತ್ತು ಉಳಿದ ಮನೆಗಳು ಇವೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ 179/2 ರ ಉಳಿದ ಜಮೀನು ಎಂದರೆ ಸರಿ , ದಕ್ಷಿಣಕ್ಕೆ ಕರೆಪ್ಪ ಬಾಳಪ್ಪಾ ಮಾಳಗಿರವರ ಜಮೀನು ಮತ್ತು ಉತ್ತರಕ್ಕೆ ಗೌಡಪ್ಪ ಮಲ್ಲಪ್ಪ ಪಾಟೀಲರವರ ಜಮೀನು ಇವೆ ಎಂದರೆ ಸರಿ . ಸರ್ವೆ ಸಂಖ್ಯೆ 179/2 ರ ಜಮೀನು

ಸಿದ್ದಪ್ಪ , ಕರೆಪ್ಪ , ಮಾರುತಿ ತಂದೆ ಬಾಳಪ್ಪಾ ಮಾಳಗಿರವರಿಗೆ ಸೇರಿದ ಜಮೀನು ಎಂದರೆ ಸರಿ . 2008 ರಲ್ಲಿ 179/2 ರಲ್ಲಿ 2 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ತಂದೆ 1 ನೇ ಪ್ರತಿವಾದಿ ಗಂಡ ಮಾರುತಿ ಗುಟಗುದ್ದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಅದೇ 2 ಗುಂಟೆ ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ . 2010 ರಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಇರಬಹುದು. 2010 ರಿಂದ ಇಲ್ಲಿಯವರೆಗೂ ಪ್ರತಿವಾದಿಯರು ದಾವಾ ರಸ್ತೆಯಲ್ಲಿ ಹಾದುಹೋಗುವುದು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಪ್ರತಿವಾದಿಯವರ ವಿರುದ್ಧ ಮಧ್ಯಂತರ ಅರ್ಜಿ ತಾತ್ಕಾಲಿಕ ನಿರ್ಬಂಧಕ ಆಜ್ಞೆಗಾಗಿ ಸಲ್ಲಿಸಿದ್ದೆ ಎಂದರೆ ಸರಿ . ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿ . 571/4 ರಲ್ಲಿ ಮಾರುತಿ ಗುಟಗುದ್ದಿರವರ ಹೆಸರು ಇದ್ದು ಅವರ ಮೇಲೆ ನಾನು ಕೇಸು ದಾಖಲಿಸಿರುವುದಿಲ್ಲ. ಗ್ರಾಮಪಂಚಾಯತಿಯಲ್ಲಿ ಆಸ್ತಿಯ ಹೆಸರು ಬಿದ್ದ ಬಗ್ಗೆ ಅಥವಾ ಠರಾವು ಪಾಸಾದ ಬಗ್ಗೆ ಪ್ರಶ್ನಿಸಿರುವುದಿಲ್ಲ. ನಮ್ಮ ತಂದೆ ಸತ್ಯಪ್ಪ ತೀರಿಕೊಂಡ ನಂತರ ಪ್ರತಿವಾದಿಯರು ಮನೆ ಕಟ್ಟಿದ ಬಗ್ಗೆ ಗ್ರಾಮಪಂಚಾಯತಿಯಲ್ಲಿ ವಿಚಾರಣೆ ಮಾಡಿರುವುದಿಲ್ಲ. ಗ್ರಾಮಪಂಚಾಯತಿಯಲ್ಲಿ ಆದ ಠರಾವನ್ನು ನಾನು ಪ್ರಶ್ನೆ ಮಾಡಿರುತ್ತೇನೆ. ಸುಮಾರು 3 ವರ್ಷಗಳ ಹಿಂದೆ ಪಂಚಾಯತಿಯಲ್ಲಿ ಪ್ರಶ್ನೆ ಮಾಡಿರುತ್ತೇನೆ. ಸದರಿ ಕೇಸ ಸಂಖ್ಯೆ ನನಗೆ ನೆನಪಿಲ್ಲ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2010 ಇಸವಿಯಲ್ಲಿ ನಾವಾಗಲೀ ನಮ್ಮ ತಂದೆಯವರಾಗಲೀ ಸದರಿ ರಸ್ತೆಯ ಬಗ್ಗೆ ತಕರಾರು ಮಾಡಿರುವುದಿಲ್ಲ. 179/2 ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿಲ್ಲ ಎಂದರೆ ಸರಿ . 179 ಬಿ/3 ರಲ್ಲಿ ಗ್ರಾಮಠಾಣಾ ಜಮೀನು ಇದ್ದು ಅಲ್ಲಿ ಯಾವುದೇ ಕೃಷಿ ಜಮೀನು ಇಲ್ಲ ಎಂದರೆ ಸರಿಯಲ್ಲ. 179 ಬಿ/3 ರಲ್ಲಿ 4 ಗುಂಟೆ ಜಮೀನನ್ನು ಸತ್ಯಪ್ಪ ಸಾತಪ್ಪ ನೀರಲಗಿರವರಿಗೆ ನಾನು ಮಾರಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿ ಮಲ್ಲಿಕಾರ್ಜುನ ಬಾಬು ಜಿರಳಿರವರಿಗೆ 2 ಗುಂಟೆ ಜಮೀನು ಮಾರಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡಿದ್ದರೂ ಸಹ ಪ್ರತಿವಾದಿಯವರಿಗೆ ತೊಂದರೆ

ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮಾರುತಿ ಲಗಮಪ್ಪ ಗುಟಗುದ್ದಿರವರು ಮನೆ ಕಟ್ಟಿದಾಗಿನಿಂದ ಸದರಿ ರಸ್ತೆಯ ಮೂಲಕ ಹಾದುಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಮಾರುತಿ ಗುಟಗುದ್ದಿ ಹಾಗೂ ಪ್ರತಿವಾದಿಯವರಿಗೆ ದಾವಾ ರಸ್ತೆ ಬಿಟ್ಟು ಬೇರೆ ರಸ್ತೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಸ್ವಾ ದೀನ ಇಲ್ಲದಿದ್ದರೂ ಸಹ ಪ್ರತಿವಾದಿಯು ಹೊಸ ರಸ್ತೆ ಮಾಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ರಸ್ತೆ ಬಂದ ಮಾಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿರುವ ಎಲ್ಲ ವಿಚಾರಗಳು ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ